ಇನಾಂ ಇಲಾಖಾ.

Registration of such service inams in the Kankanballi Taluk as were alienated before the promulgation of the Chief Commissioner's Circular dated 11th September 1835, the alienee not performing the service for which inam was originally granted.

ಮೈಸೂರು ಶೀಮೆಯ ಇನಾಂ ಸೆಟಲ್ಮೆಂಟ್ ಆಫಿಸಿನಿಂದ.

ಇದರಿಂದ ಕಾನಖಾನಹಳ್ಳಿ ತಾಲ್ಲೂಕು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚೀಫ್ ಕಮ್ಮಿಷನರ್ ಸಾಹೆಬರವರ 1876ನೇ ಇಸವಿ ಅಕ್ಟೋಬರ್ 17ನೇ ತಾರೀಖಿನ 7037—216ನೇ ನಂಬರ್ ಪ್ರೊಸೀಡಿಂಗಸಿನ 1ನೇ ಪ್ಯಾರಾ ಹುಕ್ಕುಂಗಳ ಪ್ರಕಾರ ಶ್ಯಾನುಭೋಗ, ತಳವಾರ, ನೀರಗಂಟಿ, ತೋಟಿ, ಮುಂತಾದ ಸರಕಾರ ನೌಕರರ ಇನಾಂಗಳು ಈ ಡಿಪಾರ್ಟ್ ಮೆಂಟಿನಿಂದ ಯಿನ್ನು ಮೇಲೆ ರಿಜಿಸ್ಟರ್ ಮಾಡಲ್ಪಡುವದಿಲ್ಲ.

2. ಆದರೆ ಸದರೀ ನೌಕರರ ಇನಾಂಗಳ ಪೈಕೀ ಯಾವ ಇನಾಂಗಳಾದರೂ 1835ನೇ ಇಸವಿ ಶಪ್ಟಂಬರ್ 11ನೇ ತಾರೀಖಿನ ಚೀಫ್ ಕಮ್ಮಿಷನರ್ ಸಾಹೆಬರವರ ಸರ್ಕ್ಯುಲರ್ ಹುಕ್ಕುಮಿಗೆ ಪೂರ್ವವೇ ಪರಾಧೀನವಾಗಿ ಅಂಥಾವುಗಳನ್ನು ಹಾಲೀ ಅನುಭವಿಸುವವರು ಸೌಕರೇ ಮಾಡವೇ ಇದ್ದಪಕ್ಷದಲ್ಲಿ ಅವುಮಾತ್ರ ಚೀಫ್ ಕಮ್ಮಿಷನರ್ ಸಾಹೆಬರವರ ಪ್ರೊಸೀಡಿಂಗಸಿನ 2ನೇ ಪ್ಯಾರಾ ಹುಕ್ಕುಂ ಪ್ರಕಾರ ಈ ಡಿಪಾರ್ಟ್ ಮೆಂಟಿನಲ್ಲಿ ವಿಚಾರಣೆ ಮಾಡಲ್ಪಟ್ಟು ಅನುಭವದಾರಿಗೆ $\frac{1}{3}$ ಕ್ವಿಂಪೆರೆಂಪ್ ವೈಲಿ ಖಾಯಂ ಮಾಡಲ್ಪಡುತ್ತವಾದರಿಂದ ಯಿಂಥಾ ಇನಾಂದಾರ್ರು ಈ ತಾಲ್ಲೂಕು ಇನಾಂ ವಿಚಾರಣೆ ಮಾಡುವ ಅಸಿಸ್ಟೆಂಟರಲ್ಲಿ ದಸ್ತ್ಯಾವಜಗಳು ವೆಗೈರೇ ಸಹಿತ ಹಾಜರಾಗಿ ಸ್ಟೇಟ್‌ಮೆಂಟ್‌ಗಳು ದಾಖಲ್ಮಾಡಿ ಫೈಸಲ್ಪಡಿಯತಕ್ಕದ್ದೆಂದುನ್ನೂ,

ಆಪ್ರಕಾರ ಇನಾಂ ವಿಚಾರಣೆ ಕಾಲದಲ್ಲಿ ಮತ್ತು ತಾಲ್ಲೂಕು ವಿಚಾರಣೆ ಕಾಲದಲ್ಲಿ ಸಹ ಫೈಸಲ್ಪಡಿಯದಿದ್ದರೆ ಪುತ್ತರೋತ್ತರ ಯಾವಾಗಲೂ ಅವರ ದಾವೇ ಅಂಗೀಕರಿಸಲ್ಪಡಲಾರದೆಂದುನ್ನೂ ಇದರಿಂದ ಸಮಸ್ತರಿಗೂ ತಿಳಿಯಪಡಿಸಿ ಯಿದೆ.

ಇನಾಂ ಸೆಟಲ್ಮೆಂಟ್ ಆಫಿಸ್, ಬೆಂಗಳೂರು, ಬತಾರೀಖು 28—10—76.

R. A. Cole,
Supt. of Inam Settlements.

ಫಾರೆಸ್ಟ್ ಇಲಾಖಾ.

ಇ.ಸ್ತಿ ಹಾ ರ್.

ಮೈಸೂರು ವ ಕೊಡಗು ಸೀಮೆಗಳಲ್ಲಿ ಉತ್ಪತ್ತಿಯಾವ ಬಾಬತು ಸಂದಲ್ವುಗದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ಕಂಡ ತಾರೀಖುಗಳೊಳಗೂ ಸ್ಥಳಗಳಲ್ಲಿಯೂ ನಡಿಸಲ್ಪಡುವವೆ.

ಬೆಂಗಳೂರು, 1ನೇ ಡಿಸಂಬರ್ ,, ಹೆಚ್ಚ್ಚಕಡಮೆ 100 ಟ್ಯೂಗಳು.
ಫ್ರೇಜರ್‌ಪೇಟೆ 18ನೇ ,, ,, 80 ,,

ಹರಾಜ್ ನಿಬಂಧನೆ—ಹರಾಜ್ ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವಂಬರ್ 28ನೇ ಮುಕ್ತಂ 47ನೇ ನಂಬರು ಮೈಸೂರು ಗಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ವಿಸ್ತೀತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸುಪಾಸು ಕೋಠೀಗಳಲ್ಲಿ ಯಾ ಹರಾಜ್‌ಗಳು ನವಂಬರ್ 8ಕ್ಕೆ ಜೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇ ಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತ್ತೆ. ತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರವರಿ 6ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.